ಕೊಡಿ... ನಮ್ಮ ಪೂಜೆ ಆಗಿದೆ... ದೇವರಿಗೆ ಸ್ವಲ್ಪ ಹೂ ಹಾಕಿದ್ದೆವು... ಸ್ವಲ್ಪ ಗಿಡದಲ್ಲೇ ಚಂದಕ್ಕಿರ್ಲಿ..' ಅಂತ ಬಿಟ್ಟಿದ್ದೆವು.

'ಹೌದಾ? ಹಾಗಾದ್ರೆ ಈ ಹೂವೆಲ್ಲ ದೇವಸ್ಥಾನಕ್ಕೆ ಕೊಡ್ಬೇಕಲ್ಲ ನಾನು? ಬರ್‍ಲಾ ನಾನು?' ಎನ್ನುತ್ತ ಹೂ ಸಹಿತ ಹೊರಗೆ ದೌಡಾಯಿಸಿದ್ದಳು ಅವಳು.

ಮುಂಜಾನೆಯ ಹಲವಾರು ಹೂ ಕಳ್ಳರದು ಇದೇ ಹಾಡುಪಾಡು, ನಿರ್ಭಿಡೆಯ ವರ್ತನೆ. ಬೆಳ್ಳಂಬೆಳಗ್ಗೆಯೇ ಅಕ್ಕಪಕ್ಕದ ನಾಲ್ಕಾರು ಮನೆಗಳ ಹೊರಚಾಚಿದ ಗೆಲ್ಲುಗಳಿಂದ ಸರಾಗ ಹೂ ಕೊಯ್ದು ಸ್ವಗೃಹಕ್ಕೆ ಒಯ್ಯುತ್ತಾರೆ. ಬೆಳಗಿನ ವಾಯುವಿಹಾರಿಗಳಲ್ಲೂ ಕೆಲವರು ಈ ಬಗೆಯ ಚೋರ ಕಾರ್ಯ ಪರಿಣಿತರು. ದಾರಿಯುದ್ದಕ್ಕೂ ಅಲ್ಲಲ್ಲಿ ಹೂ ಕೀಳುತ್ತ ಪ್ಲಾಸ್ಟಿಕ್ ಕವರಿನಲ್ಲಿ ತುಂಬಿಸಿಕೊಳ್ಳುತ್ತಾ ಮನೆ ಸೇರಿಕೊಳ್ಳುತ್ತಾರೆ. ಹೀಗೆ ನಿರಾಳ ಕಿತ್ತು ತಂದ ಹೂಗಳನ್ನು ಅಷ್ಟೇ ಶಾಂತ ಮನಸ್ಸಿನಿಂದ ದೇವರ ಮುಡಿಗೇರಿಸುತ್ತಾರೆ. ಕದ್ದ ಹೂ ದೇವರಿಗೆ ಅರ್ಹವೆ? ಪೂಜೆಗೆ ಪಾತ್ರವೆ? ಈ ಸೂಕ್ಷ್ಮ ಶಾಸ್ತ್ರ ಯಾರನ್ನೂ ಕೇಳಬೇಕು? 'ಯದ್ಭಾವ ತದ್ಭವತಿ!' ಒಂದು ವೇಳೆ ಅವರನ್ನೇ ಪ್ರಶ್ನಿಸಿದರೂ 'ದೇವರ ಪೂಜೆಗಲ್ಲವೆ? ಪರಮಾತ್ಮನ ಮುಡಿಗಲ್ಲವೆ? ನಮಗಲ್ಲವಲ್ಲಾ?' ಎಂದು ಉತ್ತರಿಸಿಯಾರು! ಸರ್ವವನ್ನೂ ಪರಮಾತ್ಮನಿಗೆ ಅರ್ಪಣೆಗೈಯುವ ಈ ಅನನ್ಯ ಭಕ್ತ (!) ರನ್ನು ಕ್ರೂರಿ ಕಳ್ಳರೆನ್ನಾಲಾದೀತೆ? ಸಾದಾ ಕಳ್ಳರಿವರು!

ಕೆಲವೊಮ್ಮೆ ಮುಂಜಾನೆ ವಾಯು ವಿಹಾರದ ವೇಳೆ ಅಪೂರ್ವ ಸನ್ನಿವೇಶ ಗಳೂ ಸಂವೇದ್ಯ. ಹಿರಿಯ ನಾಗರಿಕ ದಂಪತಿಗಳಾದ ನಾವು ಆರೋಗ್ಯ ಭಾಗ್ಯ ಕ್ಕಾಗಿ ನಿತ್ಯವೂ ಸುಮಾರು ಮುಕ್ಕಾಲು ಗಂಟೆ ಬೀದಿಗುಂಟ ಸಾಗುತ್ತಿರುತ್ತೇವೆ. ಒಂದು ಮುಂಜಾನೆ ನೋಡುತ್ತೇವೆ, ಮನೆ ಮುಂದಿನ ರಸ್ತೆಯಲ್ಲಿ ಕೇಬಲ್ ಲೈನಿಗಾಗಿ ಉದ್ದಕ್ಕೂ ಮಣ್ಣು ಅಗೆದು ಸಾಲಾಗಿ ಹಾಕಿದ್ದರು. ನಿಗಿ ನಿಗಿ ಕೆಂಡದಂತಹ ಕೆಂಬಣ್ಣದ ಮಿದುಮಣ್ಣು ರಾಶಿ ರಾಶಿ ದೀಪದ ಬೆಳಕಿನಲ್ಲಿ ಮಿರುಗುತ್ತಿತ್ತು. ಮರುದಿನ ದೃಶ್ಯ ಬದಲಾಗಿದೆ! ಅಲ್ಲಲ್ಲಿ ಹೊಂಡಗಳು, ನಾಲ್ಕಾರು ಬುಟ್ಟಿ ಮಣ್ಣು ಮಂಗಮಾಯ! ಯಾರ ಕೈವಾಡ? ಏನಾಯ್ತು? ನಿಬ್ಬೆರಗು ಹೊತ್ತು ಸಾಗಿದೆವು. ದಾರಿಯಲ್ಲಿ ಸಿಕ್ಕ ಪರಿಚಿತರೊಬ್ಬರು 'ತೋಟಗಾರಿಕೆಯ ಹವ್ಯಾಸವಿದ್ದ ನಿಮ್ಮ ನೆರೆಹೊರೆಯವರೇ ಕಳ್ಳರು. ರಾತ್ರೋ ರಾತ್ರಿ ನಾಲ್ಕಾರು ಬುಟ್ಟಿ ಮಣ್ಣು ಮನೆಗೆ ಸಾಗಿಸಿದ್ದು ಕಣ್ಣಾರೆ ಕಂಡಿದ್ದೇನೆ. ಆದರೆ... ಹೇಗೆ ಮಾತಾಡಲಿ?' ಎನ್ನುತ್ತ ನಕ್ಕು ಬಿಟ್ಟರು. ನಾವು ಪಿಳಿಪಿಳಿ ಕಣ್ಣಿನ ನೀರವ ಮೂರ್ತಿಗಳು!

ಒಂದು ರೀತಿಯಲ್ಲಿ ಪಿಕ್‌ಪಾಕೆಟ್ ಮಾಡುವ ಕಳ್ಳರನ್ನು ಡೀಸೆಂಟ್ ಕಳ್ಳರ ಗುಂಪಿಗೆ ಸೇರಿಸಬಹುದು. ಅವರು ಸೂಕ್ಷ್ಮ ದೃಷ್ಟಿಯ ಇನ್‌ಸ್ಟಂಟ್ ಕಳ್ಳರು. ಮಾಲೀಕರಿಗೆ ಇನಿತೂ ನೋವಾಗದಂತೆ, ಅವರ ತನುಮನಗಳಿಗೆ ತಕ್ಷಣ ನೋವಾಗದಂತೆ ಪರ್ಸ್ ಅಪಹರಿಸುತ್ತಾರೆ. ಹೀಗೆ ಸಲೀಸಾಗಿ ಧನಲಕ್ಷ್ಮಿಯನ್ನು ಕೈವಶ ಮಾಡಿಕೊಂಡು ಭಯ, ಧನ್ಯತೆ ಪಡೆದುಕೊಂಡರೆ, ಕಳಕೊಂಡವರು ಅದರ ಅರಿವಾದಾಗ ಕಂಗಾಲಾಗಿ ನೋವುಣ್ಣುತ್ತಾರೆ. ಕೆಲವು ಕಳ್ಳರು ಹಣವನ್ನೋ ಪರ್ಸನ್ನೂ ದೂರ ಸಾಗಿಸಿ ನಿರಾಳವಾಗಿ ಉಸಿರು ಬಿಡುತ್ತಾರೆ. ಆಮೇಲೆ ಅವರು ಆ ಜನಜಂಗುಳಿಯಲ್ಲೇ ಬೆರೆತು 'ಅಯ್ಯೋ ಪಾಪ, ಕಳ್ಳರು ಸಿಕ್ಕಿದ್ರೆ ಬಿಡಬಾರ್ದು' ಎಂದು ಸಹಾನುಭೂತಿಯ ನಾಟಕವಾಡುವ ನಟ ಶಿರೋಮಣಿಗಳು. ಚೋರವಿದ್ಯೆಯಲ್ಲಿ ಪಳಗಿದ ಇವರು ನಟನೆಯಲ್ಲೂ ಎತ್ತಿದ ಕೈ! ಇನ್ನು, ಸಮಾರಂಭಗಳಲ್ಲಿ, ದೇವಸ್ಥಾನ, ಕಲ್ಯಾಣ ಮಂಟಪಗಳಲ್ಲಿ ಕೊಡೆ, ಹೊಸ ಚಪ್ಪಲಿಗಳನ್ನು ನಾಜೂಕಾಗಿ ಲಪಟಾಯಿಸುವವರಂತೂ 'ಡೀಸೆಂಟ್ ಕಳ್ಳ'ರಲ್ಲದೆ ಮತ್ತಾರು?

**'A Man must not swallow more bliefs than he can digest'** ಎಂಬ ಹೇಳಿಕೆ ಹಾವ್‌ಲಾಕ್ ಎಲ್ಲಿಸ್ ಎಂಬಾತನದು. ಕೆಲವರು ತಾವು ಜೀರ್ಣಿಸಿಕೊಳ್ಳಲಾರದಷ್ಟು ಹಲವಾರು ನಂಬಿಕೆಗಳನ್ನು ಹೊಂದಿರುತ್ತಾರೆ. ಕಳ್ಳತನದ ಬಗ್ಗೆ ಅಂಥದ್ದೊಂದು ವಿಶೇಷ ನಂಬಿಕೆ ಹೊಂದಿದ್ದ ವ್ಯಾಪಾರಿಯೊಬ್ಬನ ವೃತ್ತಾಂತವಿದು. ನಮ್ಮ ಬಂಧುಗಳ ಅನುಭವವಿದು. 'ವಿಚಿತ್ರ ಆದರೂ ನಿಜ' ಅನ್ನಿಸುವ ಅಪ್ಪಟ ವಾಸ್ತವ ವರ್ತಮಾನವಿಲ್ಲಿದೆ.

ಅವರು ವಿವಿಧ ವಸ್ತುಗಳ ಮಾರಾಟದ ಜನರಲ್ ಸ್ಟೋರ್ಸ್ ಒಂದರ ಮಾಲೀಕರು. ಬೆಳಿಗ್ಗೆ ಅಂಗಡಿಗೆ ಬಂದೊಡನೆಯೇ ದೇವರ ಪಟದ ಮುಂದೆ ಕಿರು ದೀಪ ಬೆಳಗಿ, ಊದು ಬತ್ತಿ ಹಚ್ಚಿಸುತ್ತಾರೆ. ತರಿಸಿಟ್ಟುಕೊಂಡ ಸಂಪಿಗೆ, ಮಲ್ಲಿಗೆ ಮಾಲೆ ಇತ್ಯಾದಿ ಹೂಗಳನ್ನು ಪಟಕ್ಕೆ ಏರಿಸಿ ಶಿರಬಾಗುತ್ತಾರೆ. ಆಮೇಲೆ ವ್ಯಾಪಾರ ವಹಿವಾಟು.

ಒಂದು ದಿನ ಬೆಳಿಗ್ಗೆ ಅವರೊಂದಿಗೆ ಪರಿಚಿತ ವ್ಯಕ್ತಿಯೊಬ್ಬರು ಆಗಮಿಸಿದ್ದರು. ಅಂಗಡಿಯಾತ ದೀಪ ಹಚ್ಚಿ ಊದುಬತ್ತಿ ಹಚ್ಚಿಸುತ್ತಿದ್ದಾಗ, ಆತ ಆಘ್ರಾಣಿಸುತ್ತ 'ಹ, ಹಾ... ಎಂಥಾ ಪರಿಮಳ! ಸಂಪಿಗೆ ಫಸ್ಟ್, ಮಲ್ಲಿಗೆ ಸೆಕೆಂಡ್' ಎಂದು ಶ್ರೇಣೀಕೃತ ತೀರ್ಪು ನೀಡಿ ಮರಳಿ ಅಲ್ಲೇ ಇಟ್ಟು ಬಿಟ್ಟರು. ಮರುಕ್ಷಣ 'ಆಮೇಲೆ ಸಿಕ್ತೇನೆ' ಅನ್ನುತ್ತ ಹೊರಟೇ ಬಿಟ್ಟರು.

ಕಟ್ಟಾ ಆಸ್ತಿಕ ಮಾಲೀಕರಿಗೆ ನಖಶಿಕಾಂತ ಉರಿದು ಹೋಯಿತು. ಆದರೆ ಜನ ಹೋಗಿಯಾಯ್ತಲ್ಲ, ಅಲ್ಲದೆ ಪರಿಚಿತ ಬೇರೆ ಎಂದು ಮುನಿಸು ಮಾಯು ವಷ್ಟರಲ್ಲಿ ಮತ್ತೊಬ್ಬ ಗೆಳೆಯ ಅಲ್ಲಿ ಹಾಜರ್. ಮಾಲಿಕರು ಸಿಡುಕುತ್ತಲೇ ಬಾಯಿ ಬಿಟ್ಟರು 'ಅಲ್ಲಾ.... ದೇವರ ಮುಡಿಗೆ ಮೀಸಲಿಟ್ಟ ಹೂಗಳನ್ನು ಮೂಸುವುದೆಂದರೇನು?..... ಮೊದಲು ಪರಿಮಳ ನಮಗೆ, ಆಮೇಲೆ ದೇವರಿಗಾ? ಅಪಚಾರ. ಪರಿಮಳ ಕಳ್ಳತನವಾಯ್ತಲ್ಲ? ಛೇ, ಛೇ..' ಎಂದು ಛೀಗುಟ್ಟುತ್ತಾ 'ಇನ್ನು ಬೇರೆ ಹೂಮಾಲೆ ತರಿಸ್ತೇನೆ' ಎನ್ನುತ್ತ ಎತ್ತಿಕೊಂಡು 'ನಿಮ್ಮವರಿಗೆ ಕೊಡಿ' ಎಂದು ಹಸ್ತಾಂತರಿಸಿದರು.

ಗೆಳೆಯ ಅದನ್ನು ಸ್ವೀಕರಿಸಿದರೂ, ಸುಮ್ಮನಿರದೆ 'ಪರಿಮಳ ಇನ್ನೂ ಉಂಟಲ್ವಾ? ಒಂದು ವೇಳೆ ನಿಮಗೆ ಹೂ ಮಾರಿದವರೇ ಹೀಗೆ ಮಾಡಿದಿದ್ದರೆ?' ಎಂದು ಕಿಲಾಡಿ ಪ್ರಶ್ನೆ ಎಸೆದರು. ಛಲ ಬಿಡದ ವ್ಯಾಪಾರಿ 'ಅಲ್ಲಾ... ಅದು ನನ್ಗೆ ಹೇಗೆ ಗೊತ್ತಾಗಬೇಕು? ನನ್ನ ಕಣ್ಣ ಮುಂದೆ ಯಾರೂ ದೇವರ ಹೂಮಾಲೆಯ ಪರಿಮಳ ಕದೀಬಾರ್ದು ಅಷ್ಟೇ, ಅದನ್ನು ನಾನು ಸಹಿಸೋದಿಲ್ಲ..' ಎಂದರಂತೆ ನಿಷ್ಠುರವಾಗಿ. ಅವರವರ ನಂಬಿಕೆ ಅವರವರಿಗೆ!

ಡೀಸೆಂಟ್ ಕಳ್ಳರು ಎಂದಾಗ ವಿಶೇಷ ವ್ಯಕ್ತಿತ್ವವೊಂದು ಮನೋಪಟಲದಲ್ಲಿ ಸುಳಿದಾಡುತ್ತದೆ. ಕಳ್ಳತನ ಮಾಡಿಲ್ಲದಿದ್ದರೂ ಕಳ್ಳನೆಂಬ ಆರೋಪ, ಗುಮಾನಿ, (ಸ್ಯಮಂತಕಮಣಿ ಪ್ರಕರಣ) ಕಳ್ಳತನ ಮಾಡಿದರೂ 'ನವನೀತ ಚೋರ' ಎಂಬ ಪ್ರೀತಿಯ ಬಿರುದು ಪಡೆದುಕೊಂಡ ಅಪೂರ್ವ ವ್ಯಕ್ತಿತ್ವವೊಂದು ದ್ವಾಪರ ಯುಗದಲ್ಲಿ ಕಾಣಸಿಗುತ್ತದೆ. ಅದು ಶ್ರೀ ಕೃಷ್ಣ ದೇವಲ್ಲದೆ ಮತ್ತಾರು ಆಗಿರಲು ಸಾಧ್ಯ? ಸ್ಯಮಂತಕ ಮಣಿಯನ್ನು ಹುಡುಕಾಡಿ, ಪತ್ತೆ ಮಾಡಿ, ಸತ್ರಾಜಿತ ರಾಜನಿಗೇ ಅದನ್ನು ಒಪ್ಪಿಸಿ ದೋಷಮುಕ್ತನಾದ ಮಹಾಮಹಿಮ ಆತ.

ಹತ್ತಾರು ಬಾರಿ ಬೆಣ್ಣೆ ಕದ್ದರೂ ಗೆಳೆಯರಿಗೂ ಹಂಚಿ ಖುಷಿ ಪಡುತ್ತಿದ್ದವ. ಶ್ರೀಕೃಷ್ಣ ಬಾಲ್ಯಾರಭ್ಯ ನವನೀತ ಚೋರನಾಗಿದ್ದರೂ ಅದು ಅವನ ಲೀಲಾ ಪ್ರವೃತ್ತಿ ಮಾತ್ರ, ನಿತ್ಯ ವೃತ್ತಿಯಲ್ಲ. ಬಾಯಿಯಲ್ಲಿ ಮೂರು ಜಗವನ್ನೇ ಮರೆ ಮಾಡಿಕೊಂಡಿದ್ದವ ಅದನ್ನು ತಾಯಿಗೆ ತೋರಿ ವಿಸ್ಮಯ ಹರಡಿದಾತ. ರಾಧೆಯ, ನೂರಾರು ಗೋಪಿಕೆಯರ ಹೃದಯಚೋರ. ಸೊಕ್ಕಿನ ನಾರಿಯರ ವಸ್ತ್ರಾಪಹಾರಿಯಾದರೂ ವಿನೀತ ದ್ರೌಪದಿಗೆ ಅಕ್ಷಯಾಂಬರ ದಾತ. 'ಚೋರಾಗ್ರೇಸರ' ಬಿರುದಿಗೇ ಆತ ಭೂಷಣ ಪ್ರಾಯ! ಅದು ಅವನಿಗೆ ಮೆರುಗಿನ ವಿಶೇಷಣ.

ಕನ್ನಡದ ಪ್ರಾಚೀನಗ್ರಂಥ 'ವಡ್ಡಾರಾಧನೆ' ಎಂಬ ಹಳೆಗನ್ನಡದ ದಗ್ಗ ಕೃತಿಯಲ್ಲಿ ವಿದ್ಯುಚ್ಚೋರನೆಂಬ ಕಳ್ಳನ (ರಾಜನೂ ಹೌದು) ವೃತ್ತಾಂತವಿದೆ. ಆತ ಕಣ್ಣಿಗೆ ಅಂಜನ ಹಚ್ಚಿಕೊಂಡು ಅದೃಶ್ಯನಾಗಿ ರಾಜನೊಬ್ಬನ 'ಸರ್ವರುಜಾಪಹಾರಿ' ಎಂಬ ಶ್ರೇಷ್ಠಹಾರವೊಂದನ್ನು ಅಪಹರಿಸುತ್ತಾನೆ. ಇಂತಹ ಅಂಜನ ಈಗ ಲಭ್ಯವಿದ್ದರೆ ಕಳ್ಳರಿಗೆಲ್ಲ ಅಪೂರ್ವ ವರದಾನವೇ ಆಗುತ್ತಿತ್ತು. ಎಷ್ಟೋ ಕಡೆ ರಕ್ತಪಾತ, ಹೊಡೆದಾಟ, ಕೊಲೆಗಳು ತಪ್ಪಬಹುದಿತ್ತು! ಅಥವಾ ಅಂಜನಕ್ಕಾಗಿಯೇ ಇವೆಲ್ಲ ಘಟಿಸಬಹುದಿತ್ತೆ? ಬಲ್ಲವರಾರು?

ಈಗಂತೂ ನೋಟು ನಿಷೇಧದ್ದೇ ಹಗರಣ. ಈ ಹಿನ್ನೆಲೆಯಲ್ಲಿ ಹಳೆ, ಹೊಸ ನೋಟುಗಳ ವಿನಿಮಯ, ವಿಲೇವಾರಿ, ಕಮೀಷನ್ ಹೀಗೆಲ್ಲ ಹತ್ತು ಹಲವಾರು ವ್ಯವಹಾರಗಳಲ್ಲೆಲ್ಲ ಸಣ್ಣ ಕಳ್ಳರು, ದೊಡ್ಡ ಕಳ್ಳರು ಹಾಗೂ ಡೀಸೆಂಟ್ ಕಳ್ಳರು ಎಷ್ಟೆಷ್ಟೋ? ಎಲ್ಲೆಲ್ಲೋ? ಸಮಾಜದಲ್ಲಿನ ಈ ಅನುಪಾತ ಶ್ರೀಸಾಮಾನ್ಯನಿಗೆ ಅರಿವಾಗುವ ಬಗೆ ಹೇಗೆ?

ಮಾನವ ಸ್ವಭಾವದಲ್ಲಿ ಭಿನ್ನತೆ ಹೇಗೋ ಕೆಲಸಗಳಲ್ಲೂ ಹಾಗೆಯೇ. ಯುಗ ಯುಗಾಂತರಗಳಿಂದ ಚೌರ್ಯವೆಂಬ ವಿದ್ಯೆ ಹರಿದು ಬಂದಿದ್ದರೆ, ಅದರಲ್ಲಿ ಕೌರ್ಯ, ಮೋಸ, ನವಿಲುಗಾರಿಕೆ, ಉಪಾಯ, ಅಪಾಯ ಎಲ್ಲ ಸಮ್ಮಿಶ್ರವಾಗದಿದ್ದೀತೆ? ಈ ಡೀಸೆಂಟ್ ಕಳ್ಳರ ಬಗ್ಗೆ ವರ್ಣಿಸುತ್ತ, ಡೀಸೆಂಟಾಗಿ ಎಲ್ಲೆಡೆ ತರ ತರಹದ ಕಳ್ಳರ ತರಲೆ ಹೆಚ್ಚುತ್ತಿದೆ, ಮೈಯೆಲ್ಲ ಕಣ್ಣಾಗಿರಬೇಕು! ■